ತೋರದೆ ಬಿಡರು. ನನ್ನ ಶಿಷ್ಯನೊಬ್ಬ ತನ್ನ ಅಪ್ಪಯ್ಯನನ್ನು ಚಟಮುಕ್ತಿ ಕೇಂದ್ರಕ್ಕೆ ಸೇರಿಸಿದ್ದನು. ವಾರದಲ್ಲೇ ತುರ್ತು ಕರೆ ಬಂತು–ಬಂದು ಕರೆದುಕೊಂಡು ಹೋಗಿ ಎಂದು. ಆಗಿದ್ದಿಷ್ಟೆ: ಕೇಂದ್ರದಲ್ಲಿ ಪ್ರತಿ ಸಂಜೆ ವ್ಯಸನಿಗಳ ವಾಯುವಿಹಾರದ ವ್ಯವಸ್ಥೆಯಿತ್ತು. ಅಪ್ಪಯ್ಯನವರು ವಿಹಾರದ ಹಾದಿಯಲ್ಲಿ ಮಾಲನ್ನಿಡಲು ಸೂಕ್ತವ್ಯವಸ್ಥೆ ಮಾಡಿದ್ದರು. ವಾಕಿಂಗ್ ಹೋದಾಗ ಮೂತ್ರಕ್ಕೆ ಕುಳಿತಂತೆ ಮಾಡಿ ಬೇಲಿಯಲ್ಲಿ ಅಡಗಿಸಿದ್ದ ಮಾಲನ್ನು ಸೇವಿಸುತ್ತಿದ್ದರು. ವ್ಯಸನಮುಕ್ತಿ ಹಾದಿಯಲ್ಲಿ ಸಾಕಷ್ಟು ದೂರ ನಡೆದವರಿಗೂ ಹಂಚಿ, ಅವರೆಲ್ಲ ಪೂರ್ವಾಶ್ರಮಕ್ಕೆ ಹಿಂತಿರುಗುವಂತೆ ಮಾಡಿದ್ದರು. ನನ್ನ ಶಿಷ್ಯ ಹೋದಾಗ ವೈದ್ಯರು ಚಟಿಯ ಗುಣಗಾನ ಮಾಡುತ್ತ, 'ಇನ್ನೊಂದು ವಾರ ಇದ್ದರೆ ನನಗೂ ಕುಡಿಯೋದನ್ನ ಕಲಿಸ್ತಾನಪ್ಪ ಇವನು' ಎಂದರಂತೆ.

ಪಾನಲೋಕದಲ್ಲಿ ಇಂತಹ ಸಹಸ್ರಾರು ಸ್ವಾರಸ್ಯಕರ ಸಂಗತಿಗಳಿವೆ. ಆದರೆ ಈ ಲೋಕವು ದಾರುಣ ದುರಂತಗಳಿಂದ ತುಂಬಿದ ನರಕವೂ ಆಗಿದೆ. ಪಾನವು ಆಚರಣೆಯಲ್ಲಿ ಆಹಾರವಾಗಿ, ಚಳಿಯಲ್ಲಿ ಬೆಚ್ಚಾಗಿ, ಬೇನೆಯಲ್ಲಿ ಮದ್ದಾಗಿ ಇರುವುದು ಒಂದು ಮುಖವಾದರೆ; ಸಂಗದೋಷದಿಂದಲೊ ಬಾಳಬವಣೆ ಮರೆಯಲೊ ವ್ಯಸನವಾಗುವುದು ಮತ್ತೊಂದು ಮುಖ. ರಾಯಚೂರು ಸೀಮೆಯ ಲಕ್ಷಾಂತರ ಪುಟ್ಟ ವಿಧವೆಯರ ಹಿಂದಿರುವ, ಅಕಾಲಿಕ ಸಾವುಂಡ ಕುಡುಕರ ಕಥನಗಳಿವೆ. ಇದಕ್ಕೆ ನಮ್ಮ ತಾಯಮ್ಮನೇ ಪುರಾವೆ. ಸೈಕಲ್‌ರಿಕ್ಷಾ ಓಡಿಸುತ್ತಿದ್ದ ಆಕೆಯ ಗಂಡ ಆಗಾಗ ಬಂದು ಕಾಸು ಕೇಳುತ್ತಿದ್ದ. ತಾಯಮ್ಮ 'ಯಣ್ಣಾ ರೊಕ್ಕ ಕೊಡಬ್ಯಾಡ. ಕುಡಿದು ಹಾಳ್ಮಾಡ್ತಾನೆ' ಎನ್ನುತ್ತಿದ್ದಳು. ನಾನೊಂದು ದಿನ ಹಣ ಕೊಡಲು ನಿರಾಕರಿಸಿದೆ. 'ರೊಕ್ಕ ಇಲ್ಲಂದರ ನಮ್ಮ ಹೆಣಮಕ್ಕಳನ್ನ ಕಳಸಕೊಡಿರಿ' ಎಂದು ಧಮಕಿ ಹಾಕಿದ. 'ನಿನ್ನ ಹೆಂಡತಿ. ಕರಕೊಂಡು ಹೋಗಪ್ಪಾ' ಎಂದೆ. ತಾಯಮ್ಮ 'ಯಾಕ ನನ್ನ ಜೀವ ತಿಂತಿಯೊ?' ಎಂದು ಪಾತ್ರೆ ತಿಕ್ಕುತ್ತಿದ್ದ ಬೂದಿಗೈಯಲ್ಲೇ ಸೋಟೆಗೆ ತಿವಿದಳು. ಆತ 'ಏ ಭೋಸುಡಿ. ಗುಳದಾಳಿ ಕಟ್ಟಿದ ಗಂಡ ಕರದರ ಬರಂಗಿಲ್ಲ ಅಂತಿಯಾ?' ಎಂದ. ಆಕೆ ಪಟ್ಟನೆ ಕರಿಮಣಿಸರ ಕಳಚಿ ಕೈಗಿಟ್ಟಳು. ಈ ಪ್ರಹಸನ ನಮ್ಮ ಅಂಗಳದಲ್ಲಿ ಅದೆಷ್ಟು ಬಾರಿ ರಿಹರ್ಸಲ್ ಆಗಿದೆಯೊ ಲೆಕ್ಕವಿಲ್ಲ. ತಾಯಮ್ಮ ಕೆಲಸದಲ್ಲಿ

